

## ಅಪಾಯವಿಲ್ಲ ಸ್ವಾಮಿ...!

'ಮನೆಯಲ್ಲಿ ಕುಳಿತು ಬೋರ್ ಆದಾಗ ಜನ ಹೊರಗಡೆ ಹೋಗಿಬರಲು ಬಯಸುತ್ತಾರೆ. ಹೊರಗಡೆ ಹೋಗಿಬರುವುದು ಅಂದರೆ, ಒಂದಿಷ್ಟು ಜನ ಸೇರಿ ಸಿನಿಮಾ ನೋಡಿ ಬರುವುದೂ ಸೇರಿಕೊಂಡಿದೆ. ಅಮೆಜಾನ್ ಮತ್ತು ನೆಟ್‌ಫ್ಲಿಕ್ಸ್‌ಗಳು ತಾವೇ ಸಿನಿಮಾ ನಿರ್ಮಾಣ ಮಾಡಿ, ತಮ್ಮ ಮೂಲಕವೇ ಅವುಗಳನ್ನು ವೀಕ್ಷಕರಿಗೆ ತಲುಪಿಸುವ ಕೆಲಸ ಮಾಡುತ್ತಿವೆ. ಆದರೆ, ಅದರಿಂದ ಚಿತ್ರಮಂದಿರಗಳ ಮೇಲೆ ಕೆಟ್ಟ ಪರಿಣಾಮವೇನೂ ಆಗಿಲ್ಲ' ಎಂದು ಕನ್ನಡ ಸಿನಿಮಾ ನಿರ್ಮಾಪಕರೊಬ್ಬರು ಅಭಿಪ್ರಾಯಪಡುತ್ತಾರೆ.

'ಜನ ಸಿನಿಮಾ ನೋಡಿ, ಅದರ ಬಗ್ಗೆ ಒಂದಿಷ್ಟು ವಿಮರ್ಶೆಗಳು ಬಂದ ನಂತರವೇ ಸಿನಿಮಾ ಯಶಸ್ಸು ತೀರ್ಮಾನ ಆಗುತ್ತದೆ. ಮನೆಯಲ್ಲಿಯೇ ಕುಳಿತು ಸಿನಿಮಾ ನೋಡಿದಾಗ ಇದು ಪರಿಣಾಮಕಾರಿಯಾಗಿ ಆಗುತ್ತದೆಯೇ ಎಂಬ ಪ್ರಶ್ನೆಯನ್ನು ನಾವು ಕೇಳಿಕೊಳ್ಳಬೇಕು. ಹೊಸ ವ್ಯವಸ್ಥೆಯು ಸಿನಿಮಾ ವೀಕ್ಷಕರಿಗೆ ಎಷ್ಟು ಇಷ್ಟವಾಗಬಹುದು ಎಂಬುದು ಗೊತ್ತಿಲ್ಲ. ಸಿನಿಮಾ ಮಂದಿರಗಳ ಮೂಲಕ ಪ್ರದರ್ಶನ ಮಾಡುವುದು ಸಿನಿಮಾ ಹುಟ್ಟಿದ ತಕ್ಷಣವೇ ಹುಟ್ಟಿಕೊಂಡ ವ್ಯವಸ್ಥೆ. ಈ ವ್ಯವಸ್ಥೆಗೆ ಅಪಾಯ ಖಂಡಿತ ಇಲ್ಲ' ಎನ್ನುವುದು ಅವರ ಅಭಿಪ್ರಾಯ.

# ಫಸ್ಟ್ ಡೇ ಫಸ್ಟ್ ಶೋ!

ದೇಶಗಳಲ್ಲಿ ಇದೆ. ಆದರೆ, ಭಾರತದಲ್ಲಿ ಅಂತಹ ಸಂಸ್ಕೃತಿ ಇಲ್ಲ. ನಮ್ಮವರು ಸಿನಿಮಾಗಳನ್ನು ಚಿಕ್ಕ ಮೊಬೈಲ್ ಪರದೆಯ ಮೇಲೆ ಬೇಕಿದ್ದರೂ ನೋಡಲು ಸಿದ್ಧರಿದ್ದಾರೆ. ಸಿನಿಮಾ ವೀಕ್ಷಣೆಯ ಪರಿಪೂರ್ಣ ಅನುಭವವನ್ನು ಮೊಬೈಲ್ ಮೂಲಕ ದಕ್ಕಿಸಿಕೊಳ್ಳಲು ಸಾಧ್ಯವಿಲ್ಲ. ಆದರೂ, ಥಿಯೇಟರ್‌ಗೆ ಹೋಗಿಯೇ ನೋಡಬೇಕು ಎಂದು ಬಯಸುವವರು ಸೀಮಿತ ಸಂಖ್ಯೆಯಲ್ಲಿದ್ದಾರೆ. ಹೊಸದಾಗಿ ಶುರುವಾಗಲಿರುವ ಸೌಲಭ್ಯವು ಭಾರತದ ಮಟ್ಟಿಗೆ ಏಟು ಕೊಡುವಂಥದ್ದು. ಆದರೆ, ಯಾರಿಂದ ಏನು ಮಾಡಲು ಸಾಧ್ಯ? ಸಿನಿಮಾ ಗ್ರಾಹಕರನ್ನು ಒತ್ತಾಯಿಸಲು ಸಾಧ್ಯವಿಲ್ಲವಲ್ಲ' ಎಂದವರು ವಿಷಾದದಿಂದ ಹೇಳುತ್ತಾರೆ.

### ನಿರ್ಮಾಪಕರ ದೃಷ್ಟಿ

ಹಣ ಹೂಡಿಕೆ ಮಾಡುವವನ ದೃಷ್ಟಿಯಿಂದ, ಸಿನಿಮಾ ಎಂಬುದು ಒಂದು ಉದ್ಯಮ. ಹೂಡಿಕೆ ಮಾಡಿದ ಮೊತ್ತಕ್ಕಿಂತ ಹೆಚ್ಚಿನ ಮೊತ್ತ ಮರಳಿ ಬರಬೇಕು ಎಂಬ ನಿರೀಕ್ಷೆ ಸಹಜ. ಭಾರತೀಯ ವಾಣಿಜ್ಯೋದ್ಯಮ ಮಹಾಸಂಘವು (ಫಿಕ್ಕಿ) ಸಿದ್ಧಪಡಿಸಿದ ವರದಿಯೊಂದರ ಅನ್ವಯ, ಸಿನಿಮಾ ಮಂದಿರಗಳ ಮೂಲಕ ಭಾರತದಲ್ಲಿ ಚಲನಚಿತ್ರಗಳು ಗಳಿಸಿದ ಒಟ್ಟು ಆದಾಯವು 2018ರಲ್ಲಿ ₹ 10,210 ಕೋಟಿ ಆಗಿತ್ತು. ಇದು 2021ರ ವೇಳೆಗೆ ₹ 13 ಸಾವಿರ ಕೋಟಿಗೆ ತಲುಪುವ ಅಂದಾಜು 'ಫಿಕ್ಕಿ' ವರದಿಯಲ್ಲೇ ಇದೆ.

ಜಿಯೊ ಬ್ರಾಡ್‌ಬ್ಯಾಂಡ್ ಮೂಲಕ 'ಮೊದಲ ದಿನದ ಮೊದಲ ಶೋ' ಪ್ರಸಾರ ಆಗಬೇಕು ಎಂದಾದರೆ, ಚಿತ್ರ ನಿರ್ಮಾಪಕ ತನ್ನ ಸಿನಿಮಾದ ಡಿಜಿಟಲ್ ಹಕ್ಕುಗಳನ್ನು ಜಿಯೊ ಕಂಪನಿಗೆ ಮಾರಾಟ ಮಾಡಿರಬೇಕು ಎಂದು ಭಾವಿಸಲು ಅಡ್ಡಿಯಿಲ್ಲ. ಭಾರತದಲ್ಲಿ ಕೆಲವು ಯಶಸ್ವಿ ಸಿನಿಮಾಗಳು ದೇಶದೊಳಗಿನ ಚಿತ್ರಮಂದಿರಗಳ ಮೂಲಕವೇ ₹ 250 ಕೋಟಿ ಗಳಿಸಿದ ದಾಖಲೆ ಇದೆ. ಸಿನಿಮಾ ಮಂದಿರಗಳ ಮೂಲಕ ಹೆಚ್ಚು ಹಣ ಸಂಗ್ರಹಿಸಿದ ಸಿನಿಮಾದ ಡಿಜಿಟಲ್ ಹಕ್ಕುಗಳನ್ನು ನಿರ್ಮಾಪಕರು ದೊಡ್ಡ ಮೊತ್ತಕ್ಕೇ ಮಾರಾಟ ಮಾಡುತ್ತಾರೆ. 'ಜಿಯೊ ಮೂಲಕ ಮೊದಲ ದಿನದ ಮೊದಲ ಪ್ರದರ್ಶನ ಕಾಣುವ ಸಿನಿಮಾಗಳನ್ನು ತಾವು ಪ್ರದರ್ಶಿಸುವುದಿಲ್ಲ ಎಂದು ಕೆಲವು ಮಲ್ಟಿಪ್ಲೆಕ್ಸ್‌ಗಳು ಹೇಳಿವೆ. ಅಂದರೆ, ಜಿಯೊ ಆಯ್ಕೆ ಮಾಡಿಕೊಂಡ ನಿರ್ಮಾಪಕರಿಗೆ ಮಲ್ಟಿಪ್ಲೆಕ್ಸ್‌ಗಳ ಮೂಲಕ ಸಿಗಬಹುದಾದ ಆದಾಯ ಕೈತಪ್ಪಿಹೋಗುತ್ತದೆ. ಇಂತಹ ಸಂದರ್ಭದಲ್ಲಿ, ಮಲ್ಟಿಪ್ಲೆಕ್ಸ್‌ಗಳಿಂದ ಬರಬಹುದಾದ ಆದಾಯಕ್ಕಿಂತ ಹೆಚ್ಚಿನ ಮೊತ್ತವನ್ನು ಜಿಯೊ ಪಾವತಿಸಲು ಸಿದ್ಧವಿದ್ದರೆ ಮಾತ್ರ ನಿರ್ಮಾಪಕರು ತಮ್ಮ ಸಿನಿಮಾಗಳ ಡಿಜಿಟಲ್ ಹಕ್ಕುಗಳನ್ನು ಅವರಿಗೆ ಮಾರಾಟ ಮಾಡಬಹುದು' ಎಂದು ವಿಶ್ಲೇಷಿಸುತ್ತಾರೆ ಚಿತ್ರ ನಿರ್ಮಾಪಕರೊಬ್ಬರು.

> 'ಹೊಸ ವ್ಯವಸ್ಥೆಯು ನಿರ್ಮಾಪಕರಿಗೆ ಆದಾಯದ ಹೊಸ ದಾರಿಯೊಂದನ್ನು ತೆರೆಯುತ್ತದೆ ಎಂದಾದರೆ ತಪ್ಪಿಲ್ಲ. ಹೊಸ ವ್ಯವಸ್ಥೆ ಯಾರಿಗೂ ಹರ್ಟ್ ಮಾಡದಿರಲಿ. ಆದರೆ, ಚಿತ್ರಮಂದಿರದಲ್ಲಿ ಕುಳಿತು ಸಿನಿಮಾ ವೀಕ್ಷಿಸುವ ಅನುಭವಕ್ಕೆ ಪರ್ಯಾಯವನ್ನು ಕಲ್ಪಿಸುವುದು ಯಾರಿಂದಲೂ ಸಾಧ್ಯವಿಲ್ಲ'

'ಹೊಸ ವ್ಯವಸ್ಥೆಯು ನಿರ್ಮಾಪಕರಿಗೆ ಆದಾಯದ ಹೊಸ ದಾರಿಯೊಂದನ್ನು ತೆರೆಯುತ್ತದೆ ಎಂದಾದರೆ ತಪ್ಪಿಲ್ಲ. ಹೊಸ ವ್ಯವಸ್ಥೆ ಯಾರಿಗೂ ಹರ್ಟ್ ಮಾಡದಿರಲಿ. ಆದರೆ, ಚಿತ್ರಮಂದಿರದಲ್ಲಿ ಕುಳಿತು ಸಿನಿಮಾ ವೀಕ್ಷಿಸುವ ಅನುಭವಕ್ಕೆ ಪರ್ಯಾಯವನ್ನು ಕಲ್ಪಿಸುವುದು ಯಾರಿಂದಲೂ ಸಾಧ್ಯವಿಲ್ಲ' ಎನ್ನುತ್ತಾರೆ ಯುವ ನಿರ್ದೇಶಕ ಹೇಮಂತ್ ರಾವ್. ಈ ಮಾತಿಗೆ ಪೂರಕವಾದ ಅಭಿಪ್ರಾಯ ವ್ಯಕ್ತಪಡಿಸಿದ ನಟ, ನಿರ್ಮಾಪಕ ರಕ್ಷಿತ್ ಶೆಟ್ಟಿ – 'ಸಣ್ಣ ಬಜೆಟ್ಟಿನ ಸಿನಿಮಾಗಳನ್ನು ನಿರ್ಮಿಸಿ, ಪ್ರದರ್ಶನಕ್ಕೆ ಚಿತ್ರಮಂದಿರಗಳನ್ನು ಹೊಂದಿಸಿಕೊಳ್ಳಲು ಕಷ್ಟಪಡುವ ನಿರ್ಮಾಪಕರಿಗೆ ಈ ವ್ಯವಸ್ಥೆ ಸಹಾಯ ಮಾಡಬಹುದು' ಎಂದು ಹೇಳುತ್ತಾರೆ.

'ಆದರೆ, ದೊಡ್ಡ ಬಜೆಟ್ಟಿನ ಸಿನಿಮಾ ನಿರ್ಮಾಣ ಮಾಡಿದವರು ಮೊದಲ ದಿನದ ಮೊದಲ ಪ್ರದರ್ಶನವನ್ನು ಚಿತ್ರಮಂದಿರದಲ್ಲೇ ಮಾಡಲು ಬಯಸುತ್ತಾರೆಯೇ ವಿನಾ ಒಟಿಟಿ ಅಥವಾ ಇನ್ಯಾವುದೇ ಡಿಜಿಟಲ್ ವೇದಿಕೆಗಳ ಮೂಲಕ ಅಲ್ಲ'